ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರು) ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಬಿಜಾಪುರದಲ್ಲಿ ನ್ಯಾಯಾಲಯ ಸಂಕೀರ್ಣವನ್ನು ಕಟ್ಟಲು ೩೭ ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿ ಅದನ್ನು ರಿವೈಸ್ ಮಾಡಿ ಲೋಕೋಪಯೋಗಿ ಇಲಾಖೆಯ ವಿಭಾಗೀಯ ಕಛೇರಿಯಲ್ಲಿ ಪರಿಷ್ಕರಣ ಅಂದಾಜನ್ನು ಸಿದ್ಧಪಡಿಸಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸಚಿವ ಸಂಪುಟದಲ್ಲಿ ಏನಾದರೂ ಬದಲಾವಣೆಯಾಗಿದೆಯೆ ?

ಅಧ್ಯಕ್ಷರು.—ಮಾನ್ಯ ವೀರಪ್ಪ ಮೊಯಿಲಿಯವರು ಸರ್ಕಾರಿ ಕೆಲಸದ ಮೇಲೆ ನಾನು ದೆಹಲಿಗೆ ಹೋಗುತ್ತಿದ್ದೆನೆ ಆದ್ದರಿಂದ ಮಾನ್ಯ ಶಿವಣ್ಣನವರು ಉತ್ತರ ಕೊಡುತ್ತಾರೆಂದು ತಿಳಿಸಿದ್ದಾರೆ. ಅದಕ್ಕೆ ಅವರು ಪ್ರಶ್ನೆಗೆ ಉತ್ತರ ಹೇಳುತ್ತಿದ್ದಾರೆ. ನೀವು ಅವರನ್ನು ಅಭಿನಂದಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶಿವಣ್ಣನವರು ಬಹಳ ಕಷ್ಟದಲ್ಲಿದ್ದಾರೆ. ಅವರ ಇಲಾಖೆಯ ಬಗ್ಗೆ ಉತ್ತರ ಹೇಳುವುದೇ ಕಷ್ಟ. ಅಂಥಾದ್ದರಲ್ಲಿ ಇನ್ನೊಂದು ಇಲಾಖೆಯ ಬಗ್ಗೆ ಉತ್ತರ ಹೇಳುವುದು ಇನ್ನೂ ಕಷ್ಟ.

ಶ್ರೀ ಬಿ. ಶಿವಣ್ಣ —ನನ್ನ ಇಲಾಖೆಯನ್ನು ತಾವು ಆರ್ಥ ಮಾಡಿಕೊಂಡಿಲ್ಲ. ಪ್ಲಾನ್ ಅಂಡ್ ಎಸ್ಟಿಮೇಟ್ ರಿವೈಸ್ ಆಗಿದೆ. ಬಿಜಾಪುರದಲ್ಲಿ ನ್ಯಾಯಾಲಯದ ಕಟ್ಟಡ ಕಟ್ಟಲಿಕ್ಕೆ ಎಲ್ಲ ತರಹದ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಸಿ. ಎಸ್. ನಾಡಗೌಡ.—ಈಗಾಗಲೇ ನಮ್ಮ ಆರ್ಕಿಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಕೋರ್ಟ್ ಕಾಂಪ್ಲೆಕ್ಸ್ ಬದಲಾಯಿಸಿ ನಮ್ಮ ಬಿಲ್ಡಿಂಗ್‌ನ್ನು ನಮಗೇ ಕೊಡಿ ಎಂದು ನೋಟಿಸ್ ಇಷ್ಯೂ ಮಾಡಿದ್ದಾರೆ. ಈ ಬಿಲ್ಡಿಂಗ್‌ನಲ್ಲಿ ಕೊಠಡಿಗಳು ಏನಿವೆ, ಅಲ್ಲಿ ಅಡಿಷನಲ್ ಕೋರ್ಟ್‌ನ್ನು ಹೆಚ್ಚಿನ ಪ್ರಮಾಣದಲ್ಲಿ ಶುರುಮಾಡುವುದಕ್ಕೆ ಸಾಧ್ಯತೆಗಳು ಇಲ್ಲ. ಇದರಿಂದ ಸಾಕಷ್ಟು ಕೇಸುಗಳು ಪೆಂಡಿಂಗ್ ಇವೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ "Justice delayed is justice denied." ಎಂದು ಇದೆ. ಸುಮಾರು ೧೦-೧೨ ವರ್ಷಗಳಿಂದ ಸೆಶನ್ ಕೋರ್ಟ್‌ನಲ್ಲಿ ಕೇಸುಗಳು ಪೆಂಡಿಂಗ್ ಇವೆ. ಇದರಿಂದ ಬಿಜಾಪುರದ ಸಾಮಾನ್ಯ ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಬೇಗನೆ ಈ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಸ್ವಂತವಾಗಿ, ತಮ್ಮ ಅರ್ನಿಂಗ್ಸ್ ಸಲುವಾಗಿ ತಮ್ಮ ದೃಷ್ಟಿಯಲ್ಲಿಯೇ ವಿಚಾರ ಮಾಡುತ್ತಾರೆ. ಇದು ಐತಿಹಾಸಿಕವಾದ ಮತ್ತು ಅತಿ ಮಹತ್ವ ಪೂರ್ಣವಾದ ಬಿಲ್ಡಿಂಗ್ ಆಗಿದೆ. ಅದನ್ನು ಆರ್ಕಿಯಲಾಜಿಕಲ್ ಡಿಪಾರ್ಟ್‌ಮೆಂಟಿನವರಿಗೆ ಕೊಡುವುದು ಬಹಳ ಅವಶ್ಯಕವಾಗಿದೆ. ೧೯೯೦ರಲ್ಲಿ ಏನೋ ವಿಸಿಟ್ ಇಂಡಿಯಾ ಕಾರ್ಯಕ್ರಮವನ್ನು ಜಪಾನ್ ಸರ್ಕಾರ ಏರ್ಪಾಡು ಮಾಡಿದೆ. ಅದಕ್ಕೋಸ್ಕರ ಆ ಬಿಲ್ಡಿಂಗ್‌ನ್ನು ಯಾವುದೇ ಪರಿಸ್ಥಿತಿಯಲ್ಲಿ ಕೊಡಬೇಕಾದಂಥ ಸಂದರ್ಭ ಬರಬಹುದು. ಕೋರ್ಟ್‌ನಲ್ಲಿ ನಡೆಯತಕ್ಕಂಥ ಕಲಾಪಗಳು ಸ್ಥಗಿತಗೊಳ್ಳುತ್ತವೆ. ಇದರ ಬಗ್ಗೆ ಲಕ್ಷ್ಯವಹಿಸಿ ತ್ವರಿತಗತಿಯಲ್ಲಿ ಕ್ರಮಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿ, ಸರ್ಕಾರ ಈ ಕಡೆ ಗಮನ ಕೊಡಬೇಕೆಂದು ಕೂಡ ತಮ್ಮ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಶಿವಣ್ಣ.—ಹೈಕೋರ್ಟಿನವರು ಡಿಸ್ಟ್ರಿಕ್ಟ್ ಜಡ್ಜ್ ಅವರಿಗೆ ಬರೆಯುತ್ತಿದ್ದಾರೆ. ನಾವು ಕೂಡ ಕರೆಸ್ಪಾಂಡೆನ್ಸ್ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಶ್ರೀ ಷಫಿ ಅಹಮ್ಮದ್ ಅವರೇ ನಿಮ್ಮ ೫೫(೩೪೧)ರ ಪ್ರಶ್ನೆಗೆ ಸಮಯ ಬೇಕಾಗಿದೆ. ಆದ್ದರಿಂದ ಅದನ್ನು ಮುಂದಿನ ಸಾರಿ ತೆಗೆದುಕೊಳ್ಳೋಣ.

ರಾಜ್ಯದಲ್ಲಿ ನೀರಾವರಿ ಯೋಜನೆಗಳ ಪರಿಶೀಲನೆಗೆ ತಾಂತ್ರಿಕ ಸಮಿತಿ

೧೮೨. ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರ್).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ನೀರಾವರಿ ಯೋಜನೆಗಳ ಪರಿಶೀಲನೆಯ ಬಗ್ಗೆ ತಾಂತ್ರಿಕ ಸಮಿತಿಯನ್ನು (ಟೆಕ್ನಿಕಲ್ ಕಮಿಟಿ) ನೇಮಿಸಲಾಗಿದೆಯೇ?

ಆ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ. (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸರ್ಕಾರದ ಪರಿಶೀಲನೆಯಲ್ಲಿದೆ ?

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಹೆಚ್. ಬನ್ನಿಕೋಡ್. — ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಆಡಳಿತದಲ್ಲಿ ಈ ರಾಜ್ಯದ ನೀರಾವರಿ ಯೋಜನೆಗಳನ್ನು ಪರಿಶೀಲನೆ ಮಾಡಿ ಅವುಗಳನ್ನು ಕೇಂದ್ರಸರ್ಕಾರಕ್ಕೆ ಮಂಜೂರಾತಿಗಾಗಿ ಕಳಿಸುವ ಸಲುವಾಗಿ, ನೀರಾವರಿ ಸಲುವಾಗಿ ಒಂದು ತಾಂತ್ರಿಕ ಸಮಿತಿ ಈರಾಜ್ಯದಲ್ಲಿ ಇತ್ತು. ನಾವು ನೀರಾವರಿ ಬಗ್ಗೆ, ಕಾವೇರಿ ಬಗ್ಗೆ, ಕೃಷ್ಣಾ ಬಗ್ಗೆ ಸಾಕಷ್ಟು ಮಾತನಾಡುತ್ತಿದ್ದೇವೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳು ಆದರೂ ಸಹಿತ ಒಂದು ತಾಂತ್ರಿಕ ಸಮಿತಿಯನ್ನು ಈವರೆಗೆ ನೇಮಿಸಿಲ್ಲ. ಇದು ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅಂದಮೇಲೆ ಈ ನೀರಾವರಿ ಯೋಜನೆಗಳ ಬಗ್ಗೆ ಈ ಸರ್ಕಾರಕ್ಕೆ ಎಷ್ಟರ ಮಟ್ಟಿಗೆ ಕಳಕಳಿ ಇದೆಯೆಂದು ಗೊತ್ತಾಗುತ್ತದೆ. ಇನ್ನೂ ಇದು ಪರಿಶೀಲನೆಯಲ್ಲಿದ್ದರೆ, ಒಂದು ಸಮಿತಿಯನ್ನು ನೇಮಿಸುವುದಕ್ಕೆ ಇಷ್ಟೊಂದು ವಿಳಂಬವಾದರೆ, ನೀರಾವರಿ ಯೋಜನೆಗಳು ಯಾವ ರೀತಿಯಲ್ಲಿ ತ್ವರಿತವಾಗಿ ಈ ರಾಜ್ಯಕ್ಕೆ ಸಿಗಬಹುದು ? ಈ ಸರ್ಕಾರಕ್ಕೆ ನೀರಾವರಿ ಯೋಜನೆಗಳ ಬಗ್ಗೆ ನಿಜವಾಗಿ ಕಳಕಳಿ ಇದೆಯೇ ಎಂದು ಜನರಲ್ಲಿ ಶಂಕೆ ಬರುವ ರೀತಿಯಲ್ಲಿ ಸರ್ಕಾರ ಮಾಡುತ್ತಿದೆ. ಇದನ್ನು ಯಾವಾಗ ಮಾಡುತ್ತೀರಿ ಎಂದು ನಾನು ಈ ಮೊದಲು ಸರ್ಕಾರದ ಗಮನಕ್ಕೆ, ಸಚಿವರ ಗಮನಕ್ಕೆ ತಂದಿದ್ದೆ. ಈ ಸರ್ಕಾರ ರಚನೆಯಾದಾಗ ಕೊಟ್ಟಿದ್ದ ಉತ್ತರವೇ ಇವತ್ತೂ ಕೂಡ ಸಿಗುತ್ತಿದೆ ಇದರಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಆದಷ್ಟು ಬೇಗ ಒಂದು ಕಾಲಮಿತಿಯನ್ನು ಹಾಕಿಕೊಂಡು ಸರ್ಕಾರ ತಾನಾಗಿಯೇ ನೇಮಿಸಬೇಕಾದಂಥ ಸಮಿತಿ ಇದು ಇದಕ್ಕೆ ಯಾವ ತೊಂದರೆಯೂ ಇಲ್ಲ. ಏಕೆ ವಿಳಂಬ ಮಾಡುತ್ತಿದ್ದಾರೆ. ಈ ತಾಂತ್ರಿಕ ಸಮಿತಿ ಮಾಡಿದರೆ ತುಂಗಾ ಮೇಲ್ದಂಡೆ ಯೋಜನೆಯಂಥ ಮಹತ್ವದ ಯೋಜನೆಗಳನ್ನು ಪರಿಶೀಲನೆಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಬೇಕಾಗಿದೆ. ಇಲ್ಲೇ ಇಷ್ಟು ವಿಳಂಬವಾದರೆ ಕೇಂದ್ರದ ಮಂಜೂರಾತಿ ಸಿಗಬೇಕಾದರೆ ಇನ್ನೆಷ್ಟು ಕಾಲ ಕಿಡಿಯುತ್ತದೆ ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಒಂದು ಕಾಲಮಿತಿ ಹಾಕಿ ಆದಷ್ಟು ಬೇಗ ಇಂದೊ ನಾಳೆಯೊ ಈ ಸಮಿತಿಯನ್ನು ನೇಮಿಸುತ್ತೇವೆ ಎಂದು ಹೇಳಬೇಕು ಮತ್ತು ತುಂಗಾ ಮೇಲ್ದಂಡೆ ನೀರಾವರಿ ಯೋಜನೆಯನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ಮಂಜೂರಾತಿಕೊಟ್ಟು ಕೇಂದ್ರಕ್ಕೆ ಕಳಿಸುತ್ತೇವೆ ಎಂದು ಹೇಳಬೇಕು. ತಾವು ನನ್ನ ಎರಡನೇ ಪ್ರಶ್ನೆಯನ್ನು ದಯವಿಟ್ಟು ನೋಡಬೇಕು. ಈ ತಾಂತ್ರಿಕ ಸಮಿತಿಯನ್ನು ನೇಮಿಸದೆ ಇರುವುದಕ್ಕೆ ಕಾರಣ ಏನು ಎಂದು ಕೇಳಿದ್ದಕ್ಕೆ ಅದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಹಾಗಾದರೆ, ಈ ಸರ್ಕಾರಕ್ಕೆ ಯಾವರೀತಿ ಈ ರಾಜ್ಯದ ಬೃಹತ್ ನೀರಾವರಿ ಯೋಜನೆಗಳ ಬಗ್ಗೆ, ಮತ್ತು ಜನತೆಯ ಬಗ್ಗೆ ಸರ್ಕಾರಕ್ಕೆ ಎಷ್ಟು ಕಳಕಳಿ ಇದೆಯೆನ್ನುವುದನ್ನು ಇದು ಎತ್ತಿ ತೋರಿಸುತ್ತದೆ. ವಿಳಂಬಕ್ಕೆ ಕಾರಣ ಕೇಳಿದರೆ ಅದೂ ಕೂಡ ಪರಿಶೀಲನೆ ಮಾಡುವ ಸ್ಥಿತಿಯಲ್ಲಿದ್ದರೆ ಇದಕ್ಕೆ ಏನು ಹೇಳಬೇಕು? ತುಂಗಾ ಮೇಲ್ದಂಡೆ ಯೋಜನೆಯಂಥ ಸುಲಭ ಯೋಜನೆಗಳನ್ನು ಆದಷ್ಟು ವಿಳಂಬ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರ ಈ ರೀತಿ ಮಾಡುತ್ತಿದೆ ಎಂದು ಜನರಿಗೆ ಶಂಕೆ ಬರುತ್ತಿದೆ. ಆದಕ್ಕೋಸ್ಕರ ಸಚಿವರು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಹಾಗೂ ವಿಳಂಬಕ್ಕೆ ಕಾರಣ ಏನಿದೆ ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಸಹೋದ್ಯೋಗಿಗಳು ತಾಂತ್ರಿಕ ಸಮಿತಿ ನಿಧಾನವಾದುದರಿಂದ ನೀರಾವರಿ ಯೋಜನೆಗಳು ಸ್ಥಗಿತವಾಗಿವೆ, ಸರ್ಕಾರ ಆನಾಸಕ್ತಿಯಿಂದ ಇದೆ ಎಂದು ಹೇಳಿದ್ದಾರೆ. ತಾಂತ್ರಿಕ ಸಮಿತಿ ಇಲ್ಲದೆ ಯಾವುದೇ ನೀರಾವರಿ ಯೋಜನೆಗಳು ಸ್ಥಗಿತವಾಗಿಲ್ಲ. ಒಂದು ನೂರು ಲಕ್ಷಕ್ಕಿಂತ ಹೆಚ್ಚು ಹಣದ ಯೋಜನೆಗಳಿಗೆ ಮಂಜೂರಾತಿ ಕೊಡುವುದಕ್ಕೆ ತಾಂತ್ರಿಕ ಸಮಿತಿ ಬೇಕೇ ಹೊರತು, ಹಾಲಿ ಇರತಕ್ಕ ಯೋಜನೆಗಳನ್ನು ಮುಂದುವರಿಸುವುದಕ್ಕೆ, ಪೂರ್ತಿ ಮಾಡುವುದಕ್ಕೆ ತಾಂತ್ರಿಕ ಸಮಿತಿ ಅಗತ್ಯ ಇಲ್ಲ. ಆದ್ದರಿಂದ ತಾಂತ್ರಿಕ ಸಮಿತಿ ಇಲ್ಲದೇ ಯಾವುದೇ ನೀರಾವರಿ ಯೋಜನೆಗಳೂ ಸ್ಥಗಿತವಾಗಿಲ್ಲ. ಕಳೆದ ಸಾರಿಯೂ ಅವರೇ ಈ ಪ್ರಶ್ನೆಯನ್ನು ಹಾಕಿದ್ದರು. ಈಗಾಗಲೇ ತಾಂತ್ರಿಕ ಸಮಿತಿಯನ್ನು ಮಾಡತಕ್ಕ ಹಂತದಲ್ಲಿದ್ದೇವೆ. ಕೇವಲ ಒಂದು ವಾರದಲ್ಲಿ ಅನೌನ್ಸ್ ಮಾಡುವವರಿದ್ದೇವೆ. ೧೯೮೧ರಲ್ಲಿ ರಾಷ್ಟ್ರಪತಿಗಳ ಆಳ್ವಿಕೆ ಇದ್ದಾಗ ಅಧಿಕಾರೇತರು ಇದ್ದಂಥ ತಾಂತ್ರಿಕ ಸಮಿತಿಯನ್ನು ರದ್ದು ಮಾಡಿದ್ದಾರೆ ಇದಾದ ನಂತರ ಇಲಖೆಯ ಕೆಲಸಕ್ಕೆ ಅನುಕೂಲವಾಗಲಿ ಎಂದು ಅಧಿಕಾರಿಗಳ ತಾಂತ್ರಿಕ ಸಮಿತಿಯನ್ನೇ ಮುಂದುವರಿಸಿ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ತುಂಗಾ ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ತಾಂತ್ರಿಕ ಸಮಿತಿ ಇಲ್ಲದೇ ಇರುವುದರಿಂದ ಡಿಲೇ ಆಗಿದೆ ಎಂಬ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದಾರೆ. ಈ

ಯೋಜನೆಯಂನ್ನು ತಯಾರುಮಾಡುವುದಕ್ಕೆ ಸ್ವಲ್ಪ ವಿಳಂಬವಾಯಿತು. ಇದನ್ನು ರೀಕಾಸ್ಟ್ ಮಾಡಿ ತರುವುದಕ್ಕೆ ಆದೇಶ ಕೊಟ್ಟಿದ್ದೇನೆ. ತಾಂತ್ರಿಕ ಸಮಿತಿ ಭಾರಂ ಆಗದೇ ಇರುವುದರಿಂದ ಇದು ನಿಧಾನವಾಗುವುದಿಲ್ಲವೆಂದು ಹೇಳಬಯಸುತ್ತೇನೆ. ಆದರೂ ನಮ್ಮ ರಾಜ್ಯಕ್ಕೆ ತಾಂತ್ರಿಕ ಸಮಿತಿಯು ಅಗತ್ಯ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಒಂದು ವಾರದಲ್ಲಿ ಇದರ ಬಗ್ಗೆ ಅನೌನ್ಸ್ ಮಾಡುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಸಚಿವರು ತಾಂತ್ರಿಕ ಸಮಿತಿಯಿಂದ ವಿಳಂಬವಾಗಿಲ್ಲ ಎಂದು ಹೇಳಿದರು. ಹಾಗಾದರೆ ತಾಂತ್ರಿಕ ಸಮಿತಿಯ ಪರಿಶೀಲನೆ ಇಲ್ಲದೆ, ತಾಂತ್ರಿಕ ಸಮಿತಿಯ ಮಂಜೂರಾತಿ ಇಲ್ಲದೆ ಯಾವುದಾದರೂ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದೇ? ನನ್ನ ಕಡೆ ಇರತಕ್ಕ ಮಾಹಿತಿ ಪ್ರಕಾರ, ತಾಂತ್ರಿಕ ಸಮಿತಿ ಇನ್ನೂ ಆಗಿಲ್ಲ ತಾಂತ್ರಿಕ ಸಮಿತಿಯಲ್ಲಿ ಈ ಯೋಜನೆಗಳು ಪರಿಶೀಲನೆಯಾಗಬೇಕು, ಕೇಂದ್ರಕ್ಕೆ ಕಳುಹಿಸಿಕೊಡಬೇಕು. ಕೇಂದ್ರದಿಂದ ಮಂಜೂರಾತಿಯಾಗಬೇಕು. ಆದರೆ ಸಚಿವರು ಪರಿಶೀಲನೆ ಅಥವಾ ಮಂಜೂರಾತಿ ಅವಶ್ಯವಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ನಾನು ಮತ್ತೊಮ್ಮೆ, ಈ ತಾಂತ್ರಿಕ ಸಮಿತಿಯ ಪರಿಶೀಲನೆ ಹಾಗೂ ಮಂಜೂರಾತಿಯ ಅವಶ್ಯಕತೆ ಈ ನೀರಾವರಿ ಯೋಜನೆಗಳಿಗೆ ಇದೆಯೋ, ಇಲ್ಲವೋ ಎಂಬುದನ್ನು ಕೇಳುತ್ತೆನೆ. ಈ ಯೋಜನೆಗಳು ಪ್ರಾರಂಭ ಆಗುವುದಕ್ಕೆ ಇದರ ಅವಶ್ಯಕತೆ ಇದೆಯೆಂದು ನನ್ನ ಭಾವನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಸದಸ್ಯರು ನನ್ನ ಮಾತನ್ನು ತಪ್ಪು ಗ್ರಹಿಸಿದ್ದಾರೆಂದು ಕಾಣುತ್ತದೆ. ತಾಂತ್ರಿಕ ಸಮಿತಿಯ ಅವಶ್ಯಕತೆ ಇಲ್ಲ. ಮಂಜೂರಾತಿಯ ಅಗತ್ಯ ಇಲ್ಲ ಎಂದು ನಾನು ಹೇಳಲಿಲ್ಲ. ಆ ಸಮಿತಿ ಇಲ್ಲದೇ ಯಾವುದೇ ನೀರಾವರಿ ಯೋಜನೆಗಳು ಸ್ಥಗಿತವಾಗಿಲ್ಲವೆಂದು ಹೇಳಿದ್ದೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಪ್ರಾರಂಭವಾಗುವುದಕ್ಕೆ ಅವಶ್ಯಕತೆ ಇದೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಜಿ ಪುಟ್ಟಸ್ವಾಮಿಗೌಡ.—ಅಧಿಕಾರಿಗಳನ್ನೊಳಗೊಂಡ ಒಂದು ಕಮಿಟಿ ಇದೆ. ಇದರಿಂದ ನಮ್ಮ ಯೋಜನೆಗಳನ್ನು ಮಂಜೂರಾತಿ ಮಾಡುವುದಕ್ಕೆ ಮತ್ತು ಕಳಿಸತಕ್ಕ ಥಾದ್ದಕ್ಕೆ ತೊಂದರೆ ಇಲ್ಲ. ಮತ್ತೇ ಅಧಿಕಾರೇತರ ಸದಸ್ಯರನ್ನೊಳಗೊಂಡ ತಾಂತ್ರಿಕ ಸಮಿತಿಯನ್ನು ಮಾಡುವವರಿದ್ದೇವೆ. ಅದನ್ನು ಶೀಘ್ರದಲ್ಲೇ ಅನೌನ್ಸ್ ಮಾಡುತ್ತೇನೆ. ಆದ್ದರಿಂದ ನೀರಾವರಿ ಯೋಜನೆಗಳಿಗೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಆಗಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಹಾಗಾದರೆ ತುಂಗಾ ಮೇಲ್ದಂಡೆ ಯೋಜನೆಯನ್ನು ಯಾವಾಗ ಪರಿಶೀಲನೆ ಮಾಡಿ ಮಂಜೂರಾತಿಕೊಟ್ಟು ಕೇಂದ್ರಕ್ಕೆ ಕಳುಹಿಸುತ್ತೀರಿ. ತಾವು ಈ ಸದನಕ್ಕೆ ಮಾಹಿತಿ ಕೊಡುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ.—ನಾನು ಮಾನ್ಯ ಅಧ್ಯಕ್ಷರ ನೆರವನ್ನು ಕೋರುತ್ತೇನೆ. ತಾಂತ್ರಿಕ ಸಮಿತಿ ನೇಮಕ ಮಾಡದೇ ಇದ್ದಲ್ಲಿ ಅದಕ್ಕೆ ಕಾರಣಗಳೇನು ಎಂದು ಕೇಳಿದರೂ ''ಸರ್ಕಾರದ ಪರಿಶೀಲನೆಯಲ್ಲಿದೆ'' ಎಂದು ಉತ್ತರ ಕೊಟ್ಟಿದ್ದಾರೆ. ತಾಂತ್ರಿಕ ಸಮಿತಿಯನ್ನು ನೇಮಿಸಲಾಗಿದೆಯೇ ಎಂದು ಕೇಳಿದ್ದಕ್ಕೂ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ಹೇಗೆ ಎಂಬುದೇ ಅರ್ಥವಾಗುತ್ತಿಲ್ಲ, ನವಂಗೆ ಅರ್ಥವಾಗದೆ ಇರಲಿ ಎಂಬ ದೃಷ್ಟಿಯಿಂದ ಈ ಉತ್ತರ ಕೊಟ್ಟಿದ್ದಾರೊ ಅಥವಾ ಬೇರೆ ಏನಾದರೂ ಕಾರಣಗಳು ಇವೆಯೋ ಎನ್ನುವುದನ್ನು ಸನ್ಮಾನ್ಯ ಮಂತ್ರಿಗಳು ಹೇಳಬೇಕು.

ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ಎಂದು ಕೇಳಿದರೆ, ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ಸರಕಾರದ ಉತ್ತರನೇ ? ಸರಕಾರ ಉತ್ತರ ಕೊಡುವ ರೀತಿಯೇ ಇದು.

ಶ್ರೀ ಬಿ.ಹೆಚ್. ಬನ್ನಿಕೋಡ್ — ಈ ಸಂಬಂಧಪಟ್ಟ ಫೈಲ್, ನೀರಾವರಿ ಮಂತ್ರಿಗಳಿಂದ ಮುಖ್ಯ ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಂದ ನೀರಾವರಿ ಮಂತ್ರಿಗಳಿಗೆ ಓಡಾಡುತ್ತಿದೆ. ಇದಕ್ಕೆ ಕಾರಣ ಮಾಡುಕಬೇಕಾಗಿದೆ ಎಂದು ಸಚಿವರು ಹೇಳಿದ್ದರೆ ತಪ್ಪಾಗಲಿಕ್ಕಿಲ್ಲ ಎಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಫೈಲ್ ವಿಷಯ ಪ್ರಸ್ತಾಪಿಸುವುದಿದ್ದರೆ ಫೈಲ್ ಮುಖ್ಯಮಂತ್ರಿಗಳಿಗೂ ಹೋಗಬೇಕಾಗುತ್ತದೆ, ನೀರಾವರಿ ಮಂತ್ರಿಗಳಿಗೂ ಹೋಗಬೇಕಾಗುತ್ತದೆ, ನೀರಾವರಿ

ಮಂತ್ರಿಗಳು ಒಪ್ಪಿಗೆ ಕೊಡಬೇಕಾಗುತ್ತದೆ, ನಂತರ ಅಧಿಕಾರಿಗಳ ಹತ್ತಿರವೂ ಹೋಗಬೇಕಾಗುತ್ತದೆ ಆದೆಲ್ಲಾ ಆಫೀಸಿನ ನಿಯಮಗಳ ಪ್ರಕಾರ ನಡೆಯಬೇಕಾಗುತ್ತದೆ. ಇದಕ್ಕೆ ಕಾರಣಗಳೇನು ಎಂದು ಕೇಳಿದ್ದಕ್ಕೆ ಅದು ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ ಎಂದು ಮಾನ್ಯ ವಿಕಾಂತಯ್ಯನವರು ಒತ್ತಿ ಒತ್ತಿ ಹೇಳುತ್ತಿದ್ದಾರೆ. ವಿಳಂಬವಾಗಿರುವುದು ಏತಕ್ಕೆ ಎಂದು ಹೇಳುವುದಕ್ಕೆ ಬದಲಾಗಿ ಅದನ್ನೂ ಕೂಡ ಪರಿಶೀಲನೆ ಮಾಡಿ ಬೇಗ ಮುಗಿಸುತ್ತೇವೆ ಎಂಬ ಅರ್ಥದಲ್ಲಿ ಈ ರೀತಿ ಹೇಳಿದ್ದೇವೆ.

ಶ್ರೀ ಹೆಚ್. ವಿಕಾಂತಯ್ಯ.—ನನಗೆ ತೃಪ್ತಿ ಆಗುವುದು ಬೇಡ. ಮಾನ್ಯ ಅಧ್ಯಕ್ಷರಿಗೆ ತೃಪ್ತಿ ಆಗಿದ್ದರೆ ಸರಿ

ಅಧ್ಯಕ್ಷರು.—ನನಗೆ ಅರ್ಥವೇ ಆಗಲಿಲ್ಲ. ಇನ್ನು ತೃಪ್ತಿ ಆಗುವ ಪ್ರಶ್ನೆ ಎಲ್ಲಿಂದ ಬಂತು.

ಶ್ರೀ ಹೆಚ್. ವಿಕಾಂತಯ್ಯ.—ಸಾಧ್ಯವಾದಷ್ಟೂ ಈ ರೀತಿ ಉತ್ತರಗಳನ್ನು ಕೊಡದಿರುವಂತಹ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಅದನ್ನು ನೋಟ್ ಮಾಡಿಕೊಳ್ಳಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್ —ಸಮಿತಿ ಯಾವಾಗ ಮಾಡುತ್ತೀರಿ. ತುಂಗಾ ಮೇಲ್ದಂಡೆ ಯೋಜನೆಯನ್ನು ಪರಿಶೀಲನೆಗೆ ಕೇಂದ್ರಕ್ಕೆ ಯಾವಾಗ ಕಳುಹಿಸುತ್ತೀರಿ ?

ಅಧ್ಯಕ್ಷರು.—ಒಂದು ವಾರದಲ್ಲಿ ಮಾಡುತ್ತೇನೆಂದು ಹೇಳಿದ್ದಾರಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಬನ್ನಿಕೋಡ್‌ರವರ ಪ್ರಶ್ನೆ, ತಾಂತ್ರಿಕ ಸಮಿತಿಯನ್ನು ಯಾವಾಗ ಮಾಡುತ್ತೀರಿ ಎಂಬುದು ಒಂದು ವಾರದಲ್ಲಿ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ತುಂಗಾ ಪ್ರಾಜೆಕ್ಟ್ ಬಗ್ಗೆ ಕೇಳುತ್ತಿದ್ದಾರೆ. ಈ ಪ್ರಶ್ನೆಯಲ್ಲಿ ಅದು ಉದ್ಭವಿಸುವುದಿಲ್ಲ

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ಪರಿಶೀಲನೆ ಮಾಡುವಾಗ, ಆ ನದಿಯ ಬಲಭಾಗದಲ್ಲಿರುವ ರೈತರಿಗೂ ನೀರಿನ ಅವಶ್ಯಕತೆ ಬಹಳ ಇದೆ. ಆ ಸಮಯದಲ್ಲಿ ಈ ಸ್ಥಳವನ್ನೂ ಪರಿಶೀಲನೆ ಮಾಡುವುದು ಸಾಧ್ಯ ಇಲ್ಲವೇ ಸ್ವಾಮಿ ?

ಅಧ್ಯಕ್ಷರು.—ಇದು ತಾಂತ್ರಿಕ ಸಮಿತಿಯ ವಿಚಾರ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾಂತ್ರಿಕ ಸಮಿತಿಯನ್ನು ರಚನೆ ಮಾಡಿದಾಗ ಯೋಜನೆಯನ್ನು ತಯಾರು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಕೇಳುತ್ತಿರುವುದು ನದಿಯ ಎಡ ಭಾಗದಲ್ಲಿರುವ ಪ್ರದೇಶಕ್ಕೆ ನೀರಿನ ಸೌಕರ್ಯವನ್ನು ಒದಗಿಸುವ ವಿಷಯ.

ಅಧ್ಯಕ್ಷರು.—ಇಲ್ಲಿ ಎಡಭಾಗ ಬಲಭಾಗದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಅವಶ್ಯಕವಾಗಿ ಬೇಕು. ಎಡಭಾಗದಲ್ಲಿರುವ ಪ್ರದೇಶದ ರೈತರು ಏಷ್ಟೊಂದು ತೊಂದರೆಯನ್ನು ಅನುಭವಿಸುತ್ತಿದ್ದಾರೋ ಅಷ್ಟೇ ತೊಂದರೆಯನ್ನು ಬಲಭಾಗದಲ್ಲಿರುವ ರೈತರೂ ಕೂಡ ಅನುಭವಿಸುತ್ತಿದ್ದಾರೆ. ಆದುದರಿಂದ ಈ ಭಾಗಕ್ಕೂ ಕೂಡ ನೀರು ಒದಗಿಸುವುದಕ್ಕೆ, ತಾಂತ್ರಿಕ ಸಮಿತಿಯಂ ಮುಂದೆ ಈ ವಿಚಾರ ಪರಿಶೀಲನೆಗೆ ಬರುವಾಗ, ಮಾನ್ಯ ಮಂತ್ರಿಗಳು ಈ ವಿಷಯವನ್ನೂ ಪರಿಶೀಲನೆಗೆ ಸಮಿತಿಯ ಮುಂದೆ ತರುವುದಕ್ಕೆ ಸಾಧ್ಯ ಇದೆ, ತರತಕ್ಕಂಥ ಅವಶ್ಯಕತೆ ಇದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ಆದರೂ ಕೂಡಾ ಅವರು ಹೇಳುವ ಸಲಹೆಯನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ನಾನು ಕೇಳಿದಾಗ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದರು ಈಗ ಅವರು ಕೇಳಿದ್ದಕ್ಕೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರೂ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ನಾನು ಆ ಕಡೆ ಇಲ್ಲ, ಈ ಕಡೆ ಇದ್ದೇನೆ ಎಂದು ಮಾನ್ಯ ಮಂತ್ರಿಗಳು ತಿಳಿದುಕೊಂಡಿದ್ದರೆ ಅದು ಸರಿಯಾಗಲಿಕ್ಕಿಲ್ಲ. ಮಾನ್ಯ ಸದಸ್ಯರು ಬಲದಂಡೆ ವಿಚಾರ ಹೇಳಿದರು. ಆದರೆ ನಾವು ಕೇಳಿರುವುದು ಬಚಾವತ್ ಆಯೋಗದ ತೀರ್ಪಿನ ಪ್ರಕಾರ ನಮ್ಮ ನೀರಿನ ಹಕ್ಕಿನ ಬಳಕೆಯ ಬಗ್ಗೆ, ನಮ್ಮ ಅಧಿಕಾರವನ್ನು, ಹಕ್ಕನ್ನು ಚಲಾಯಿಸುವುದಕ್ಕೆ ಇದನ್ನು ಕೇಳುತ್ತಿದ್ದೇನೆಯೇ ವಿನಹ ಬೇರೇನೂ ಇಲ್ಲ. ನಿಮಗೆ ಬಚಾವತ್ ಆಯೋಗದ ಪ್ರಕಾರ ನೀರಿನ ಹಕ್ಕನ್ನು ಕೊಟ್ಟಿದ್ದರೆ ಅದನ್ನು ತಾವು ಬಳಸಿಕೊಳ್ಳುವುದಕ್ಕೆ ನನ್ಮದೇನೂ ಅಭ್ಯಂತರ ಇಲ್ಲ.